# ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮೂಡುಶೆಡ್ಡೆ

# ಅಂಚೆ, ವಾಮಂಜೂರು, ಮಂಗಳೂರು

# ದಕ್ಷಿಣಕನ್ನಡ ಜಿಲ್ಲೆ–575 028

## ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದಜೈವಿಕಉದ್ಯಾನವನದ ಪ್ರಾಣಿಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವಕುರಿತು ಟೆಂಡರ್

**ಟೆಂಡರ್‌ಪ್ರಕಟಣೆ**

**ಸಂಖ್ಯೆ:ಪಿನಿಧಾ/ವಿವ/189/ಪಿಬಿಪಿ/2017–18, ದಿನಾಂಕ:26.7.2018**

# ಡಾ. ಶಿವರಾಮಕಾರಂತ ಪಿಲಿಕುಳ ನಿಸರ್ಗಧಾಮ

## DR. SHIVARAMA KARANTHA PILIKULA NISARGA DHAMA

ವಿಜ್ಞಾನಕೇಂದ್ರ, ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824 – 2263565 ಫ್ಯಾಕ್ಸ್ : 2263562

Science Centre, Moodushedde Post, Mangalore – 575 028 Ph : 0824 – 2263565 Fax : 2263562

**Website:**www.pilikula.com **Email:**pilikula96@gmail.com


ಸಂಖ್ಯೆ:ಪಿನಿಧಾ/ವಿವ:189/ಪಿಬಿಪಿ/2017–18 ದಿನಾಂಕ:26/07/2018

**: ಸವಿವರಟೆಂಡರ್ ಪ್ರಕಟಣೆ :**

ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದಜೈವಿಕಉದ್ಯಾನವನದ ಪ್ರಾಣಿ ಪಕ್ಷಿಗಳಿಗೆ ಅಗತ್ಯವಿರುವಆಹಾರ ಪದಾರ್ಥಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡಲುದ್ದಿ ಲಕೋಟೆ ಪದ್ಧತಿ ಪ್ರಕಾರನಿಬಂಧನೆಗಳಿಗೆ ಒಳಪಟ್ಟು ಟೆಂಡರ್‌ನ್ನುಆಹ್ವಾನಿಸಲಾಗಿದೆ.ಲಕೋಟೆ 1 ರಲ್ಲಿತಾಂತ್ರಿಕ ಷರತ್ತಿನಂತೆ ಸೂಚಿಸಲಾದಎಲ್ಲಾ ಅಂಶಗಳನ್ನು ಭರ್ತಿಮಾಡಿ ನಮೂನೆ 1 ರಜೊತೆ ಲಕೋಟೆ 1ರ ಕವರಿನಲ್ಲಿ ಮೊಹರು ಮಾಡಿರಬೇಕು ಹಾಗೂ "ತಾಂತ್ರಿಕ ಬಿಡ್"ಎಂದು ಲಕೋಟೆ ಮೇಲೆ ನಮೂದಿಸಬೇಕು. ಲಕೋಟೆ 2 ರಲ್ಲಿ ನಮೂನೆ 2 ರ ಆರ್ಥಿಕ ಬಿಡ್ ದರವನ್ನು ನಮೂದಿಸಿ ಮೊಹರು ಮಾಡಿರಬೇಕು ಹಾಗೂ "ಆರ್ಥಿಕ ಬಿಡ್"ಎಂದು ಲಕೋಟೆ ಮೇಲೆ ನಮೂದಿಸಿರಬೇಕು. ಈ ಎರಡು ಲಕೋಟೆಗಳನ್ನು ಇನ್ನೊಂದು ದೊಡ್ಡ ಲಕೋಟೆಯಲ್ಲಿ ಹಾಕಿ "ಪ್ರಾಣಿಪಕ್ಷಿಗಳ ಆಹಾರ ಸರಬರಾಜು ಮಾಡಲುಟೆಂಡರ್"ಎಂದು ನಮೂದಿಸಿ ಸಲ್ಲಿಸಬೇಕು. ತಾಂತ್ರಿಕ ಬಿಡ್ ಸರಿಯಿಲ್ಲದಿದ್ದಲ್ಲಿಟೆಂಡರ್‌ದಾರರ ಆರ್ಥಿಕ ಬಿಡ್‌ಅನ್ನು ಪರಿಗಣಿಸಲಾಗೂದಿಲ್ಲ.

| ಕ್ರ.ಸಂ | ವಿವರ | ದಿನಾಂಕ ಮತ್ತು ಸಮಯ |
|---|---|---|
| 1 | ಟೆಂಡರ್ ಮೊತ್ತ | ಪ್ರತಿ ತಿಂಗಳು ರೂ. 99.60 ಲಕ್ಷಗಳು (ಅಂದಾಜು) |
| 2 | ಇ.ಎಂ.ಡಿ. | ರೂ. 2,49,000/– |
| 3 | ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲುಕೊನೆಯ ದಿನಾಂಕ | ದಿನಾಂಕ:27.08.2018ರ<br>ಸಂಜೆ: 3:30 ಗಂಟೆಗೆ |
| 4 | ತಾಂತ್ರಿಕ ಬಿಡ್ ಮತ್ತುಆರ್ಥಿಕ ಬಿಡ್‌ತೆರೆಯುವ ದಿನಾಂಕ: | ದಿನಾಂಕ:28.8.2018ರ<br>ಅಪರಾಹ್ನ:4:00ಗಂಟೆಗೆ<br>ಸ್ಥಳ:ಕಾರ್ಯನಿರ್ವಾಹಕ ನಿರ್ದೇಶಕರಕಚೇರಿ, ಪಿಲಿಕುಳ ನಿಸರ್ಗಧಾಮ, ಮೂಡುಶೆಡ್ಡೆ, ಮಂಗಳೂರು. |

ಹೆಚ್ಚಿನ ವಿವರಗಳಿಗೆ ಕಾರ್ಯನಿರ್ವಾಹಕ ನಿರ್ದೇಶಕರು, ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ, ಮೂಡುಶೆಡ್ಡೆ, ಮಂಗಳೂರು, ದಕ್ಷಿಣಕನ್ನಡಜಿಲ್ಲೆ ಇವರನ್ನು ಸಂಪರ್ಕಿಸುವುದು.

**ದೂರವಾಣಿ ಸಂಖ್ಯೆಗಳು**

ಕಾರ್ಯನಿರ್ವಾಹಕ ನಿರ್ದೇಶಕರು:0824–2263565

ನಿರ್ದೇಶಕರು, ಪಿಲಿಕುಳ ಜೈವಿಕಉದ್ಯಾನವನ:0824–2263300

ಆಡಳಿತಾಧಿಕಾರಿ: 9901790670

ವೈಜ್ಞಾನಿಕಅಧಿಕಾರಿ: 7204155527

ವೆಟರಿನರಿಅಧಿಕಾರಿ: 9886693327

ಕಾರ್ಯನಿರ್ವಾಹಕ ನಿರ್ದೇಶಕರು

1. **ಆಹಾರ ಸಾಮಗ್ರಿಗಳು ಮತ್ತು ಇತರೆಆಹಾರ ಪದಾರ್ಥಗಳ ವಿವರ.**

ಪ್ರತಿ ಮಾಹೆ ಸರಬರಾಜು ಮಾಡಬೇಕಾಗಿರುವಉತ್ತಮಗುಣಮಟ್ಟದಆಹಾರ ಪದಾರ್ಥಗಳ ಅಂದಾಜು ಪ್ರಮಾಣ

| ಕ್ರ.ಸಂ | ಆಹಾರ ಪದಾರ್ಥದ ಹೆಸರು | ಪ್ರಮಾಣ | ಪ್ರತಿ ತಿಂಗಳ ಅಂದಾಜು ಬೇಡಿಕೆ |
|---|---|---|---|
| | **ಐಟಂ ನಂ. I** | | |
| 1 | ಮಾಂಸ (ಶೇ.30 ರಷ್ಟು ಮೂಳೆ) Meat ( with30% bone) | ಕೆ.ಜಿ | 3300 |
| 2 | ಕೋಳಿ (ಜೀವಂತ) (Chicken (Live)) | ಕೆ.ಜಿ. | 600 |
| 3 | Snake Feed | ಸಂಖ್ಯೆ | 21 |
| 4 | ಮೀನು (Fish) | ಕೆ.ಜಿ | 120 |
| 5 | ಮೊಟ್ಟೆ (Eggs) | ಸಂಖ್ಯೆ | 190 |
| | **ಐಟಂ ನಂ. II** | | |
| 1 | ಹುರುಳಿ (Horse Gram) | ಕೆ.ಜಿ | 800 |
| 2 | ಗೋಧಿ ಹೊಟ್ಟು (Wheat Bran) | ಕೆ.ಜಿ | 1000 |
| 3 | ಅಕ್ಕಿ (Rice) | ಕೆ.ಜಿ | 50 |
| 4 | ಉಪ್ಪು(Common Salt) | ಕೆ.ಜಿ | 30 |
| 5 | ನೆಲಗಡಲೆ (Ground Nut) | ಕೆ.ಜಿ | 30 |
| 6 | ಗೋದಿ (Wheat) | ಕೆ.ಜಿ | 100 |
| 7 | ರಾಗಿ(Ragi) | ಕೆ.ಜಿ | 15 |
| 8 | ಕಬ್ಬು (Sugar Cane) | ಕೆ.ಜಿ | 16 |
| 9 | ಸಿಹಿಗೆಣಸು (Sweat Potato) | ಕೆ.ಜಿ | 300 |
| 10 | ಕ್ಯಾರೆಟ್ (Carrot) | ಕೆ.ಜಿ | 45 |
| 11 | ಹಸಿರು ತರಕಾರಿ( Vegetables) | ಕೆ.ಜಿ | 660 |
| 12 | ಹಾಲು (Milk) | ಲೀ. | 50 |
| 13 | ಹಣ್ಣುಗಳು (Fruits) | ಕೆ.ಜಿ | 660 |
| 14 | ಬೆಲ್ಲ, (Jaggary) | ಕೆ.ಜಿ | 35 |
| 15 | ತೆಂಗಿನಕಾಯಿ (Coconut) | ಸಂಖ್ಯೆ | 65 |
| 16 | ಬ್ರೇಡ್ (Bread - Fresh) | ಕೆ.ಜಿ | 40 |

| | | | |
|---|---|---|---|
| 17 | ಇಲಿ ಆಹಾರ (Rat Feed (Pallets) | ಕೆ.ಜಿ | 30 |
| 18 | ಪಶು ಆಹಾರ (Cattle Feed) | ಕೆ.ಜಿ | 60 |
| 19 | ಕೋಳಿ ಆಹಾರ (Poultry Feed) | ಕೆ.ಜಿ | 180 |
| 20 | ಹೆಸರು ಕಾಳು (Green Gram) | ಕೆ.ಜಿ | 80 |
| 21 | ಕಡ್ಲೆಬೇಳೆ (Bengal Gram) | ಕೆ.ಜಿ | 80 |
| 22 | ಜೋಳ (Sweet Corn) | ಕೆ.ಜಿ | 30 |
| 23 | ಭತ್ತ(Paddy) | ಕೆ.ಜಿ | 30 |
| 24 | ಬಟಾಣಿ( Green Peas) | ಕೆ.ಜಿ | 80 |
| 25 | ಸೂರ್ಯಕಾಂತಿ ಬೀಜ( Sun flower Seeds) | ಕೆ.ಜಿ | 30 |
| 26 | ಕಿರು ಧಾನ್ಯಗಳು (Millates) | ಕೆ.ಜಿ | 30 |
| | **ಐಟಂ ನಂ. III** | | |
| 1 | ಹಸಿರು ಸೊಪ್ಪು (Green Leaves of Halasu/Banyan Trees) | ಕೆ.ಜಿ | 15000 |
| | | | |

**2.**

**ತಾಂತ್ರಿಕ ಷರತ್ತುಗಳು:–**

1. ಇ.ಎಂ.ಡಿ. ರೂ. **2,49,000/–**ನ್ನುಡಿ.ಡಿ./ಬ್ಯಾಂಕರ್ಸ್‌ಚೆಕ್ ಮುಖಾಂತರಕಾರ್ಯನಿರ್ವಾಹಕ ನಿರ್ದೇಶಕರು, ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮಇವರಿಗೆ ಪಾವತಿಯಾಗುವಂತೆ ನೀಡುವುದು.
2. ಟೆಂಡರ್‌ದಾರರು ಹಿಂದಿನ ಐದು ವರ್ಷಗಳಲ್ಲಿ ಕನಿಷ್ಟ ಎರಡು ವರ್ಷದಲ್ಲಿರೂ. 2.00 ಕೋಟಿ ಹಣಕಾಸಿನ ವ್ಯವಹಾರ ನಡೆಸಿರುವ ಬಗ್ಗೆ (ಲೆಕ್ಕಪರಿಶೋಧಕರಿಂದ) ಪಡೆದ ವಾರ್ಷಿಕ ವಹಿವಾಟುತಖ್ತೆ ( Annual turnover statement)ಯದೃಢಿಕೃತ ಪ್ರತಿ ಲಗತ್ತಿಸಬೇಕು.ಇದರಲ್ಲಿಕಳೆದ 5 ವರ್ಷಗಳಲ್ಲಿ ಕನಿಷ್ಟ 1 ವರ್ಷದಲ್ಲಿವಾರ್ಷಿಕರೂ.80.00 ಲಕ್ಷಕ್ಕೆಕಡಿಮೆಇಲ್ಲದಂತೆ ಜೈವಿಕ ಉದ್ಯಾನವನ/ ಅಗ್ರ ಶ್ರೇಣಿಯ ಮ್ರುಗಾಲಯಕ್ಕೆಆಹಾರ ಸರಬರಾಜು ಮಾಡಿರುವ ಬಗ್ಗೆ ಸಂಬಂಧಪಟ್ಟ ಸಂಸ್ಥೆಯಿಂದ ದ್ರಢ ಪತ್ರವನ್ನು ಪಡೆದು ಲಗುತ್ತಿಸಬೇಕು.
3. FSSAIಸರ್ಟಿಫಿಕೆಟ್‌ದೃಢಿಕೃತ ಪ್ರತಿ ಲಗತ್ತಿಸಬೇಕು
4. ಟೆಂಡರ್‌ದಾರರುಕನಿಷ್ಟಎರಡು ಬಾರಿಜೈವಿಕಉದ್ಯಾನವನಅಥವ ಅಗ್ರ ಶ್ರೇಣಿಯ ಮೃಗಾಲಯಕ್ಕೆ ಆಹಾರ ಸರಬರಾಜು ಮಾಡಿರಬೇಕು.
5. ಪ್ಯಾನ್‌ಕಾರ್ಡ್‌ನಒಂದುಜೆರಾಕ್ಸ್‌ದೃಢೀಕೃತ ಪ್ರತಿ ಲಗತ್ತಿಸುವುದು.
6. GST ರಿಜಿಸ್ಟ್ರೇಶನ್ (ನಂಬ್ರ) ಪ್ರತಿ ಲಗತ್ತಿಸುವುದು.

7. ಹಿಂದಿನ ಎರಡು ವರ್ಷಗಳ ವರಮಾನತೆರಿಗೆ ಪಾವತಿ ಧೃಡ ಪತ್ರದ ರಿಟರ್ನ್ಸ್ ಪ್ರತಿ ಸಲ್ಲಿಸಬೇಕು. **(2015–16 ಮತ್ತು 2016–17)**
8. ಟೆಂಡರ್‌ದಾರರು ತಾವು ಮತ್ತು ತಮ್ಮ ಸಂಸ್ಥೆ ಯಾವುದೇ ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಲ್ಲದಿರುವ ಬಗ್ಗೆ ಮತ್ತು ಯಾವುದೇ ಕ್ರಿಮಿನಲ್ ಕೇಸ್‌ಗಳಲ್ಲಿ ಭಾಗಿಯಾಗಿರುವುದಿಲ್ಲವೆಂಬ ಬಗ್ಗೆ ಸ್ವಯಂ ಘೋಷಣೆ ಪತ್ರದ ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು.
9. ಟೆಂಡರ್‌ದಾರರ ಹೆಸರು, ಪೂರ್ಣ ವಿಳಾಸ, ವಯಸ್ಸು ಮತ್ತುದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.
10. ಆಹಾರ ಸರಬರಾಜಿನ ವ್ಯವಹಾರ ನಡೆಸಿರುವ ಬಗ್ಗೆ 5–10 ವರ್ಷದಅನುಭವದೃಢಪತ್ರದ ಪ್ರತಿ ಲಗತ್ತಿಸಬೇಕು ಹಾಗು ಟೆಂಡರ್ ಸಮಯದಲ್ಲಿ ಹಾಜರುಪಡಿಸಬೇಕು.
11. ಸರಬರಾಜುದಾರರು ಮಹಾನಗರ ಪಾಲಿಕೆಯ ಲೈಸೆನ್ಸ್‌ಪಡೆದಿರಬೇಕು.

## 3. <u>ಇತರೆ ಷರತ್ತುಗಳು</u>

1. ಈ ಗುತ್ತಿಗೆಯು ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದ ಮೆಮೊರಾಂಡಂಅಂಡ್ ಅಸೋಸಿಯೇಶನ್‌ಗೆ ಹಾಗು ಕೇಂದ್ರ ಮೃಗಾಲಯ ಪ್ರಾದಿಕಾರದ ನಿಯಮಗಳಿಗೆ ಒಳಪಟ್ಟಿರುತ್ತದೆ.
2. ಸರಬರಾಜು ಮಾಡುವ ಮಾಂಸವು ತಾಜಾ ಆಗಿರಬೇಕು ಹಾಗು ಮಾಂಸವನ್ನು ಕಡಿದ 2 ಗಂಟೆಗಳ ಒಳಗೆ ಸರಬರಾಜು ಮಾಡಬೇಕು
3. ಜೈವಿಕ ಉದ್ಯಾನವನದ ವೆಟರ್ನರಿ ಮತ್ತು ಇತರೆ ಅಧಿಕಾರಿಗಳು ಮಾಂಸವನ್ನು ಪರಿಶೀಲಿಸಿದಾಗ ರೋಗಸ್ತ್ರ ಪಶುಗಳ ಮಾಂಸ ಅಥವ ತಾಜಾವಲ್ಲದ ಫ್ರೀಜ್‌ಆಗಿರುವ ಮಾಂಸವೆಂದು ಕಂಡುಬಂದಲ್ಲಿ ಸೇರಿದ್ದರೆ ಅಂತಹ ಮಾಂಸಗಳನ್ನು ತಿರಸ್ಕರಿಸಲಾಗುವುದು.
4. ಟೆಂಡರು ದಾರರು ಪ್ರತಿದಿನ ಸರಬರಾಜು ಮಾಡುವ ಮಾಂಸದ (ಪ್ರಾಣಿಗಳ) ಇಡೀ ಬಾಗದ ಮಾಂಸವನ್ನು ಒದಗಿಸಬೇಕು.
5. ಸರಬರಾಜು ವೇಳೆ ಕಡಿದ ಪ್ರಾಣಿಗಳ ಒಳಾಂಗ (ಲಿವರ್, ಶ್ವಾಶಕೋಶ, ಕಿಡ್ನಿ, ಹೃದಯ) ಗಳನ್ನು ಕೂಡ ಮಾಂಸದೊಟ್ಟಿಗೆ ಪ್ರತ್ಯೇಕವಾಗಿ ಹಾಜರು ಪಡಿಸಬೇಕು.
6. ಒಂದು ಸಂಸ್ಥೆ ಹಾಗೂ ಮಾಲೀಕರ ಹೆಸರಿನಲ್ಲಿ ಪಡೆದ ಟೆಂಡರ್ ಅರ್ಜಿಗಳನ್ನು ಇತರೆ ಸಂಸ್ಥೆ / ಮಾಲೀಕರ ಹೆಸರಿನಲ್ಲಿಟೆಂಡರ್ ಸಲ್ಲಿಸಲು ಅವಕಾಶ ಇರುವುದಿಲ್ಲ.
7. ಟೆಂಡರ್‌ದಾರರುಆಹಾರ ಸಾಮಗ್ರಿಗಳ ಆರ್ಥಿಕ ಬಿಡ್ಡಿನಲ್ಲಿ ಟೆಂಡರ್ ದರಗಳನ್ನು ನಮೂದಿಸಿವಾಗ ಕೆ.ಜಿ./ಸಂಖ್ಯೆಒಂದಕ್ಕೆದರವನ್ನು ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು.
8. ಸರಬರಾಜು ಗುತ್ತಿಗೆ ಅವಧಿಯು ದಿನಾಂಕ **1.10.2018 ರಿಂದ 31.09.2019** ರವರೆಗೆ ಅಥವಾ ಮುಂದಿನ ಟೆಂಡರ್ ಗುತ್ತಿಗೆ ಇತ್ಯರ್ಥವಾಗುವವರೆಗೆ, ಅಥವಾ ಕಾರಣಾಂತರಗಳಿಂದ ಟೆಂಡರ್ ಅವಧಿ ಮೀರಿದಲ್ಲಿ ಅಂದಿನಿಂದ 3 ತಿಂಗಳವರೆಗೆ ಟೆಂಡರ್ ದರದಲ್ಲೇ ಸರಬರಾಜು ಮಾಡಲು ಟೆಂಡರ್‌ದಾರರು ಬದ್ದರಾಗಿರುತಾರೆ.
9. ಟೆಂಡರುದಾರರು ಆಯಾ ಘಟಕಗಳಿಗೆ ಟೆಂಡರನ್ನು ಸಲ್ಲಿಸುವ ಮುನ್ನ ಸ್ಥಳೀಯ ವಿದ್ಯಮಾನಗಳ, ಪದಾರ್ಥಗಳ ದೊರೆಯುವಿಕೆ, ಗುತ್ತಿಗೆಯ ಸಾಮಾನ್ಯ ಮತ್ತು ವಿಶೇಷ ಷರತ್ತುಗಳನ್ನು ತಿಳಿದಿರತಕ್ಕದ್ದು.
10. ಸರ್ಕಾರಕ್ಕೆ ನಿಯಮಾನುಸಾರ ಪಾವತಿಸಬೇಕಾದಎಲ್ಲಾ ತೆರಿಗೆಗಳನ್ನು ಗುತ್ತಿಗೆದಾರರೇ ಪಾವತಿಸಬೇಕು.

11. ಟೆಂಡರ್‌ನಲ್ಲಿಅಂಗೀಕಾರವಾದ ದರಗಳನ್ನು ಯಾವುದೇಕಾರಣಕ್ಕೂ ಪರಿಷ್ಕರಿಸಲು ಸಾಧ್ಯವಿಲ್ಲ. ಆದರೆ, ಗುತ್ತಿಗೆಅವಧಿಯನ್ನು ಮುಂದುವರಿಸುವಅಥವಾಗುತ್ತಿಗೆಅವಧಿಯಲ್ಲಿಆಹಾರ ಸಾಮಾಗ್ರಿಗಳ ದರವು ಮಾರುಕಟ್ಟೆಯಲ್ಲಿಅತಿಯಾಗಿ ಹೆಚ್ಚಾದಲ್ಲಿಅಥವಾತೀವ್ರರೀತಿಯಲ್ಲಿಕಡಿಮೆಗೊಂಡಲ್ಲಿಗುತ್ತಿಗೆದಾರರೊಂದಿಗೆ ಚರ್ಚಿಸಿ ದರಗಳನ್ನು ಹೆಚ್ಚು ಅಥವಾಕಡಿಮೆ ಮಾಡುವಅಧಿಕಾರವನ್ನು ಪಿಲಿಕುಳ ನಿಸರ್ಗಧಾಮದ ಆಡಳಿತ ಸಮಿತಿಯು ಹೊಂದಿರುತ್ತದೆ.
12. ಯಶಸ್ವಿ ಟೆಂಡರುದಾರರುಗುತ್ತಿಗೆ ಮೊತ್ತದ ಶೇ. 5ರಷ್ಟು (ರೂ.4,98,000/-) ಮೊಬಲಗನ್ನು ಭದ್ರತಾ ಠೇವಣಿಯಾಗಿಇಡಬೇಕು. ಗುತ್ತಿಗೆ ಅವಧಿ ಮುಗಿದ ಬಳಿಕಆಹಾರ ಸರಬರಾಜಿನಲ್ಲಿ ಯಾವುದೇ ಲೋಪದೋ಼ ನಷ್ಟ ದೂರುಗಳಿಲ್ಲದಿದ್ದಲ್ಲಿ ಭದ್ರತಾಠೇವಣಿಯನ್ನು ಯಾವುದೇ ಬಡ್ಡಿ ಇಲ್ಲದೆ ಹಿಂದಿರುಗಿಸಲಾಗುವುದು.
13. ಯಶಸ್ವಿಯಾಗದ ಟೆಂಡರುದಾರರ ಇ.ಎಂ.ಡಿ. ಮೊಬಲಗನ್ನು ಜಯಶೀಲರಾದ ಟೆಂಡರುದಾರರು ಕರಾರು ಬರೆದುಕೊಟ್ಟ ನಂತರ ಇಲ್ಲವೇ ಕಾರ್ಯ ನಿರ್ವಾಹಕ ನಿರ್ದೇಶಕರವರು ತೆಗೆದುಕೊಳ್ಳುವ ನಿರ್ಣಯದಂತೆ ಇ–ಪೋರ್ಟಲ್ ಮೂಲಕ ಹಿಂದಿರುಗಿಸಲಾಗುವುದು.
14. ಯಶಸ್ವಿ ಟೆಂಡರುದಾರರಿಗೆ ಸರಬರಾಜು ಆದೇಶ ನೀಡಿದ್ದಾಗ್ಯೂ, ಕರಾರು ನಂತರದ ಸರಬರಾಜು ಆದೇಶ ನೀಡುವ ಮುನ್ನ, ಸದರಿಯವರು ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಾರೆಂದು ಕಂಡು ಬಂದಲ್ಲಿ ಅಥವಾ ಯಾವುದೇ ದಾಖಲೆಗಳು ಸರಿ ಇಲ್ಲವೆಂದು ಕಂಡುಬಂದಲ್ಲಿ, ಸರಬರಾಜು ಆದೇಶವನ್ನು ರದ್ದುಪಡಿಸಿ ಕ್ರಮವಾಗಿ 2ನೇ ಕಡಿಮೆ ದರದ ಟೆಂಡರುದಾರರೊಂದಿಗೆ ಸಂಧಾನ ಮಾಡಿ ಟೆಂಡರ್ ಇತ್ಯರ್ಥ ಮಾಡುವ ಅಧಿಕಾರ ಕಾರ್ಯ ನಿರ್ವಾಹಕ ನಿರ್ದೇಶಕರಿಗೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಉಂಟಾಗುವ ಹೆಚ್ಚುವರಿ ವೆಚ್ಚಗಳಿಗೆ ತಪ್ಪಿತಸ್ಥ ಟೆಂಡರುದಾರರು ಜವಾಬ್ದಾರರಾಗಿರುತ್ತಾರೆ.
15. ಟೆಂಡರ್ /ಕರಾರು ಷರತ್ತುಗಳನ್ನು ಉಲ್ಲಂಘಿಸುವ ಟೆಂಡರುದಾರರಿಗೆ/ ಗುತ್ತಿಗೆದಾರರಿಗೆ ಈ ಕಛೇರಿಯಿಂದ ಕಳುಹಿಸುವ ಇ–ಮೇಲ್ ಅಥವಾ ಎಸ್.ಎಂ.ಎಸ್.ಗಳು ಅಧಿಕೃತ ದಾಖಲೆಗಳಾಗಿರುತ್ತವೆ.
16. ಕಾರ್ಯನಿರ್ವಾಹಕ ನಿರ್ದೇಶಕರು ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಟೆಂಡರನ್ನು ಅಂಗೀಕರಿಸುವ ಇಲ್ಲವೇ ತಿರಸ್ಕರಿಸುವ ಅಥವಾ ಸಂಧಾನ ಮಾಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
17. ದಿನಾಂಕ **29.08.2018 ರಂದು 12.00** ಗಂಟೆಯೊಳಗೆ, ಉತ್ತಮ ದರ್ಜೆಯ ಸ್ಯಾಂಪಲ್‌ಗಳೊಂದಿಗೆ ಕಡಿಮೆ ದರ ನಮೂದಿಸಿದಂತಹ ಯಶಸ್ವಿ ಟೆಂಡರುದಾರರೊಂದಿಗೆ ಐಟಂವಾರು ಬೆಲೆ ಹಾಗೂ ಉತ್ತಮ ಗುಣಮಟ್ಟಗಳ ಬಗ್ಗೆ ಸಂಧಾನ ಮಾಡುವ ಹಕ್ಕನ್ನು ಕಾರ್ಯನಿರ್ವಾಹಕ ನಿರ್ದೇಶಕರು ಕಾಯ್ದಿರಿಸಿಕೊಂಡಿರುತ್ತಾರೆ.ನಿಗಧಿತ ಸಮಯಕ್ಕೆ ಕಡಿಮೆ ದರ ನಮೂದಿಸಿರುವಂತಹ ಯಶಸ್ವಿ ಟೆಂಡರುದಾರರು ಹಾಜರಿರತಕ್ಕದ್ದು. ಹಾಗೂ ಅವರು ಮೊಬೈಲ್ ದೂರವಾಣಿ ಅಥವಾ ಇ–ಮೇಲ್‌ಗಳ ಸಂದೇಶಗಳಿಗೆ ಕೂಡಲೇ ಉತ್ತರಿಸುವುದು ಟೆಂಡರುದಾರರ ಜವಾಬ್ದಾರಿ ಆಗಿರುತ್ತದೆ.
18. ಈ ಟೆಂಡರು ಪ್ರಕಟಣೆಯ ಪರಿಶಿಷ್ಟದಲ್ಲಿ ಕಾಣಿಸಿರುವ ಆಹಾರ/ ಸಂಕೀರ್ಣ ಸಾಮಗ್ರಿಗಳ ಪ್ರಮಾಣ ಅಂದಾಜಿನದಾಗಿದ್ದು ಅಗತ್ಯಕ್ಕೆ ತಕ್ಕಂತೆ ಹೆಚ್ಚಿಸಲು ಅಥವಾ ಕಡಿಮೆಗೊಳಿಸಲು ಬದ್ಧವಾಗಿರುತ್ತದೆ.ಆದರೆ ಟೆಂಡರುದಾರರು ಗುತ್ತಿಗೆದಾರರು ಕೋರಿಕೆ ಪತ್ರದಲ್ಲಿರುವ ಪ್ರಮಾಣದ ಪದಾರ್ಥಗಳನ್ನು ಅಂಗೀಕೃತ ದರದಲ್ಲಿಯೇ ಸರಬರಾಜು ಮಾಡತಕ್ಕದ್ದು.

19. ಚಾಲ್ತಿಯಲ್ಲಿರುವ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ, 2006 ಮತ್ತು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮಗಳು–2011 ಇವುಗಳ ಬಗ್ಗೆ ಟೆಂಡರುದಾರರುಗಳು ತಿಳಿದಿರತಕ್ಕದ್ದು. ಹಾಗು ಅದರಂತೆ ಕಾರ್ಯನಿರ್ವಹಿಸಬೇಕು.
20. ಯಶಸ್ವಿ ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಗುತ್ತಿಗೆಯನ್ನು ಪೂರ್ಣವಾಗಿ ಅಥವಾ ಭಾಗಶ: ಇತರರಿಗೆ ಕೊಡಲು ಅವಕಾಶವಿರುವುದಿಲ್ಲ.
21. ಯಶಸ್ವಿ ಟೆಂಡರುದಾರರು, ಮೃಗಾಲಯದಿಂದ ವಿಧಿವತ್ತಾಗಿ 3 ದಿನಗಳ ಮುನ್ನ ಕಳುಹಿಸುವ ಕೋರಿಕೆ ಪತ್ರ ಅನುಸಾರವಾಗಿ ಆಹಾರ ಮತ್ತು ಸಾಮಾಗ್ರಿ ಪದಾರ್ಥಗಳನ್ನು ಸರಬರಾಜು ಮಾಡತಕ್ಕದ್ದು.
22. ಜೈವಿಕ ಉದ್ಯಾನವನಕ್ಕೆ ಆಹಾರ ಸಾಮಾಗ್ರಿಗಳನ್ನು ಸಾಗಿಸುವ ತಮ್ಮ ವಾಹನದಲ್ಲಿ ಆಹಾರ ಪದಾರ್ಥಗಳನ್ನಲ್ಲದೆ ಬೇರೆ ಯಾವೂದೇ ವಸ್ತುಗಳು (ಟಾರ್ಪಲ್, ಟೈರ್, ಹಗ್ಗ, ಇತ್ಯಾದಿ) ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ಸರಿಯಾದ ತೂಕ ಕೊಡತಕ್ಕದ್ದು.
23. ಪ್ರತೀ ತಿಂಗಳಅಂತ್ಯದಲ್ಲಿ ಗುತ್ತಿಗೆದಾರರು ಸರಬರಾಜು ಮಾಡಲಾದ ಪದಾರ್ಥಗಳ ಬಗ್ಗೆ ದ್ವಿಪ್ರತಿಯಲ್ಲಿ ಬಿಲ್ಲನ್ನು ಸಂಬಂಧಪಟ್ಟ ರಶೀದಿ/ ಸ್ವೀಕೃತಿಗಳ ಸಹಿತವಾಗಿ ಅದರ ಮುಂದಿನ ತಿಂಗಳ 5ನೇ ತಾರೀಖಿನ ಒಳಗಾಗಿ ಕಛೇರಿಗೆ ಸಲ್ಲಿಸತಕ್ಕದ್ದು.ಗುತ್ತಿಗೆದಾರರ ಹೆಸರಿನಲ್ಲಿ ಅಡ್ಡಗೆರೆ ಹಾಕಿ ಧನಾದೇಶವನ್ನು ನೀಡುವ ಮೂಲಕ ಹಣವನ್ನು ಹಣಕಾಸಿನ ಆಧಾರದ ಮೇಲೆ ಪಾವತಿ ಮಾಡಲಾಗುವುದು.ಆದುದರಿಂದ ಅನಿರೀಕ್ಷಿತವಾಗಿ ಆಗಬಹುದಾದ ವಿಳಂಬದ ಕಾರಣ ಆಹಾರ ಪದಾರ್ಥಗಳ ಸರಬರಾಜನ್ನು ನಿಲ್ಲಿಸದೇ ಅಥವಾ ಕಡಿತಗೊಳಿಸದೇ ಸರಿಯಾದ ಪ್ರಮಾಣದಲ್ಲಿ ಹಾಗು ಗುಣಮಟ್ಟದಲ್ಲಿ ಸರಬರಾಜು ಮಾಡತಕ್ಕದ್ದು.ಅಲ್ಲದೇ ಹಣ ಪಾವತಿಸುವಲ್ಲಿ ಆಗಬಹುದಾದ ಅನಿವಾರ್ಯ ಸಂದರ್ಭಗಳಲ್ಲಿ ಬಿಲ್ಲು ನಗದೀಕರಣವಾಗದಿದ್ದರೂ ನಿರಂತರ ಸರಬರಾಜು ಮಾಡಲು ಆರ್ಥಿಕ ಸಾಮರ್ಥ್ಯವನ್ನು ಗುತ್ತಿಗೆದಾರರು ಹೊಂದಿರತಕ್ಕದ್ದು.
24. ಬಿಲ್ಲುಗಳನ್ನು ಪಾವತಿಸುವಾಗ ಕಣ್ತಪ್ಪಿನಿಂದಾಗಿ ಹೆಚ್ಚು/ ಕಡಿಮೆ ಮೊತ್ತಗಳನ್ನು ಸ್ವೀಕರಿಸಿದ ಯಶಸ್ವಿ ಟೆಂಡರ್‌ದಾರರು ಕೂಡಲೇ ಮೃಗಾಲಯ ಕಛೇರಿಗೆ ಮಾಹಿತಿ ನೀಡತಕ್ಕದ್ದು ಅಧಾಗ್ಯೂ ಯಾವುದೇ ಸಂಧರ್ಭದಲ್ಲಿ ಪರಿಶೀಲನೆ ನಂತರ ಕಡಿಮೆ ಪಡೆದ ಮೊತ್ತವನ್ನು ಒಂದೇ ಕಂತಿನಲ್ಲಿ ಪಡೆಯಲು ಹಾಗೂ ಹೆಚ್ಚಿಗೆ ಪಡೆದ ಮೊತ್ತವನ್ನು ಒಂದೇ ಕಂತಿನಲ್ಲಿ ಮೃಗಾಲಯಕ್ಕೆ ಹಿಂತಿರುಗಿಸಲು ಟೆಂಡರ್‌ದಾರರು ಬದ್ಧರಾಗಿರುತ್ತಾರೆ.
25. ಗುತ್ತಿಗೆದಾರರು ತಮ್ಮ ಅಧಿಕೃತ ಕೆಲಸಗಾರರ (ಗುತ್ತಿಗೆಯ ಸಾಮಾನುಗಳನ್ನು ಮೃಗಾಲಯಕ್ಕೆ ತಂದು ಕೊಡುವವರು) ಹೆಸರು ಮತ್ತು ಫೋಟೋಗಳನ್ನು ಹಾಗು ಗುರುತು ದಾಖಲೆಗಳನ್ನು ಒದಗಿಸಿ ಅದನ್ನು ಅಧಿಕೃತ ಅಧಿಕಾರಿಯಿಂದ ಅಂಗೀಕರಿಸಿ ಕೊಳ್ಳತಕ್ಕದ್ದು. ಹಾಗೂ ಪದಾರ್ಥಗಳನ್ನು ಮೃಗಾಲಯಕ್ಕೆ ಹೊತ್ತು ತರುವ ವಾಹನ ಮತ್ತು ಅದರ ನಂಬರನ್ನು ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹವರನ್ನು ಮೃಗಾಲಯದ ಒಳಗೆ ಬಿಡಲಾಗುವುದಿಲ್ಲ.ಅಧಿಕ್ರತ ಸಹಾಯಕರುಗಳು ಸನ್ನಡತೆಯರಾಗಿರತಕ್ಕದ್ದು.ಅಂತಹ ಯಾವುದೇ ಸಹಾಯಕರು ಟೆಂಡರ್ ಷರತ್ತುಗಳಿಗೆ ಹಾಗೂ ಮೃಗಾಲಯದ ರೀತಿ ನೀತಿಗಳಿಗೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅಥವಾ ಸಿಬ್ಬಂದಿಯೊಡನೆ ಶಿಸ್ತಿನಿಂದ ನಡೆದುಕೊಳ್ಳದಿದ್ದಲ್ಲಿ ಉಲ್ಲಂಘಣೆಗಳ ಮಹತ್ವಗಳನ್ನಾಧರಿಸಿ ಗುತ್ತಿಗೆದಾರರ ಮೇಲೆ ಹಾಗೂ ಅವರ ಸಹಾಯಕರ ಮೇಲೆ ಕ್ರಮ ಜರುಗಿಸಲಾಗುವುದು.
26. ಯಶಸ್ವಿ ಗುತ್ತಿಗೆದಾರರು ಮೃಗಾಲಯವು ನೇಮಿಸಿಕೊಂಡಿರುವ ಯಾವುದೇ ಕೆಲಸಗಾರರನ್ನು ತಮ್ಮ ಯಾವುದೇ ಕೆಲಸ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಕೂಡದು.

27. ಯಶಸ್ವಿ ಗುತ್ತಿಗೆದಾರರು ಕೋರಿಕೆ ಪತ್ರದಲ್ಲಿ ನಮೂದಿಸಿದ ಪದಾರ್ಥಗಳನ್ನು ಸಂಪೂರ್ಣವಾಗಿ ಸರಬರಾಜು ಮಾಡತಕ್ಕದ್ದು. ಕಡಿಮೆ ಸರಬರಾಜು ಮಾಡುವ ಯಾವುದೇ ವಸ್ತುಗಳನ್ನು ಅಗತ್ಯ ಇದ್ದಲ್ಲಿ ಇತರೆ ಮೂಲಗಳಿಂದ ಖರೀದಿಸುವ ಕ್ರಮ ಕೈಗೊಳ್ಳಲಾಗುವುದು.ಈ ಕ್ರಮದಿಂದ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ಗುತ್ತಿಗೆದಾರರ ಬಿಲ್ಲಿನಿಂದ ಸರಿದೂಗಿಸಿಕೊಳ್ಳಲಾಗುವುದು.ಅವಶ್ಯವಿದ್ದಲ್ಲಿ ಇದನ್ನು ಅವರ ಭದ್ರತಾ ಠೇವಣಿಯಿಂದಲೂ ಹೊಂದಾಣಿಕೆ ಮಾಡಿ ಕೊಂಡಾಗ, ಅಂತಹ ಮೊತ್ತವನ್ನು ಅಂದಿನಿಂದ (7) ಏಳು ದಿವಸಗಳ ಒಳಗಾಗಿ ತುಂಬಿಸಿ ಕೊಡತಕ್ಕದ್ದು.
28. ತಿರಸ್ಕರಿಸಲ್ಪಟ್ಟ ಪ್ರಾಣಿಗಳ ಆಹಾರ ಸಾಮಾಗ್ರಿಗಳು, ಕೋರಿಕೆಯ ನಂತರ ತಡವಾಗಿ ಸರಬರಾಜು ಮಾಡಿದ ಪ್ರಯುಕ್ತ ಹಾಗೂ ಇನ್ನಿತರ ಕಾರಣಗಳಿಂದ ಅವುಗಳ ಅವಶ್ಯಕತೆಯಿಲ್ಲವಾಗುವ ಸಂದರ್ಭಗಳಲ್ಲಿ ಗುತ್ತಿಗೆದಾರರು ಅವನ್ನು ಕೂಡಲೇ ಮೃಗಾಲಯದಿಂದ ವಾಪಸ್ಸು ತೆಗೆದುಕೊಂಡು ಹೋಗದಿದ್ದ ಪಕ್ಷದಲ್ಲಿ ಅಂತಹ ವಸ್ತುಗಳು ಮೃಗಾಲಯದಗುತ್ತಿಗೆದಾರರ ಪೂರ್ಣ ಜವಾಬ್ದಾರಿಕೆಯಲ್ಲಿರುತ್ತದೆ.ಇಂತಹ ಸಂದರ್ಭಗಳಲ್ಲಿ ಪತ್ರ ವ್ಯವಹಾರ ಪ್ರಮುಖವಾಗಿರುವುದಿಲ್ಲ.
29. ಜಯಶೀಲರಾದ ಟೆಂಡರುದಾರರು ಗುತ್ತಿಗೆಯ ಯಾವುದೇ ಷರತ್ತುಗಳ ಉಲ್ಲಂಘನೆ ಮಾಡಿದ್ದಲ್ಲಿ ಮತ್ತು ಯಾವುದೇ ಆಹಾರ/ ಸಂಕೀರ್ಣ ಸಾಮಾಗ್ರಿಗಳು ಕಡಿಮೆ ಸರಬರಾಜು, ಇತ್ಯಾದಿ ಕೃತ್ಯ ಎಸಗಿದಲ್ಲಿ ಅಂತಹ ಮೊದಲ ಮೂರು ಪ್ರಕರಣಗಳಲ್ಲಿ ಒಂದೊಂದು ಪ್ರಕರಣ ಹಾಗೂ ಒಂದೊಂದು ಐಟಂಗಳಿಗೆ ರೂ. 1,000/- (ಒಂದು ಸಾವಿರ ರೂಪಾಯಿ) ವರೆಗೂ ಹಾಗೂ ನಂತರದ ಪ್ರಕರಣಗಳಲ್ಲಿ ರೂ. 2,000 ವರೆಗೂ ದಂಡವನ್ನು ವಿಧಿಸಲಾಗುವುದು.ಅದಾಗ್ಯೂ "ಹಸಿರುಹುಲ್ಲು ಮತ್ತು ಕಟ್ ಬ್ರ್ಯಾಂಚಸ್ ಐಟಂಗಳಿಗೆ ಶೇ.10% ರಷ್ಟು ಪ್ರಮಾಣವನ್ನು ತೇವಾಂಶ ಬತ್ತಿಹೋಗುವುದರ ಬಾಬ್ತು ದಂಡದ ವ್ಯಾಪ್ತಿಯಿಂದ ಸಡಿಸಲಾಗುವುದು.
30. ಮೇಲಿನಂತೆ ವಿಧಿಸುವ ದಂಡದ ಮೊತ್ತವನ್ನು ಸಂಬಂಧಪಟ್ಟ ಗುತ್ತಿಗೆದಾರರ ಬಿಲ್ಲಿನಿಂದ ಮುರಿದುಕೊಳ್ಳಲಾಗುತ್ತದೆ.ಉಲ್ಲಂಘನೆಯ ಮುಂದುವರೆದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ತಮ್ಮ ವಿವೇಚನೆ ಮೇರೆಗೆ ಹೆಚ್ಚಿನ ದಂಡ ವಿಧಿಸುವ ಗುತ್ತಿಗೆ ಅಮಾನತು ಪಡಿಸುವ ಅಥವಾ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರ ಹೊಂದಿರುತ್ತಾರೆ.
31. ಅಂಗೀಕೃತಟೆಂಡರ್‌ದಾರರು ಸ್ವತಃ ಸರಬರಾಜು ನಿರ್ವಹಿಸಬೇಕಾಗಿರುತ್ತದೆ. ಬೇರೆಯಾರಿಗೂ ಇ ಗುತ್ತಿಗೆಅಥವಾ ಮರುಗುತ್ತಿಗೆ ವಹಿಸಿಕೊಟ್ಟಲ್ಲಿ ಯಾವುದೇ ನೋಟೀಸ್‌ಕೊಡದೆಗುತ್ತಿಗೆಯನ್ನುರದ್ದು ಪಡಿಸಲಾಗುವುದು ಹಾಗೂ ಭದ್ರತಾಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
32. ಗುತ್ತಿಗೆದಾರರು ತಮ್ಮ ವಾಹನಗಳನ್ನು ಜೈವಿಕ ಉದ್ಯಾನವನಕ್ಕೆ ತರುವ ಮುನ್ನ ಪ್ರಭಾರದಲ್ಲಿರುವ ಅಧಿಕಾರಿಗಳಿಂದ ಅನುಮತಿಯನ್ನು ಪಡೆದಿರಬೇಕು.
33. ಗುತ್ತಿಗೆದಾರರು ನಮೂದಿಸುವ ದರಗಳು ಇಡೀ ಗುತ್ತಿಗೆ ಅವಧಿಗೆ ಚಾಲ್ತಿಯಲ್ಲಿರುತ್ತದೆ.ಈ ಅವಧಿಯಲ್ಲಿ ಯಾವುದೇ ಕಾರಣದಿಂದಲೂ ದರವನ್ನು ಹೆಚ್ಚಿಸುವ ಬಗ್ಗೆ ಕೋರಿಕೆಗಳು, ಅಥವಾ ಇನ್ನ್ಯಾವುದೇ ರಿಯಾಯಿತಿಗಳ ಕೋರಿಕೆಯನ್ನು ಪುರಸ್ಕರಿಸಲಾಗುವುದಿಲ್ಲ.
34. ಹಸಿರು ಸೊಪ್ಪನ್ನು ಕನಿಷ್ಟ 5 ಕಿ.ಮೀ.ನೊಳಗಿನಿಂದ ಸರಬರಾಜು ಮಾಡಲು ಸಂಸ್ಥೆಯ ವಾಹನವನ್ನುಒದಗಿಸಲಾಗುವುದು. ಆದ್ದರಿಂದ, ಹಸಿರು ಸೊಪ್ಪು ಸರಬರಾಜಿಗೆ ಸಾಗಣಿಕೆ ವೆಚ್ಚವನ್ನು ಹೊರತುಪಡಿಸಿ ನಮೂದಿಸಬೇಕು.
35. ನಿಗದಿತ ದಿನಾಂಕದ ನಂತರ ಸ್ವೀಕೃತವಾದ ಟೆಂಡರನ್ನುತಿರಸ್ಕರಿಸಲಾಗುವುದು.

36. ಟೆಂಡರ್/ ಅಂಗೀಕರಿಸುವ ಪ್ರಾಧಿಕಾರವುಟೆಂಡರ್ ಸ್ವೀಕರಿಸುವ ಮೊದಲುಯಾವುದೇಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ/ರದ್ದುಪಡಿಸುವ, ಹೊಸ ಷರತ್ತುಗಳನ್ನು ಸೇರಿಸುವ, ಅಥವಾಈರುವ ಷರತ್ತುಗಳನ್ನು ರದ್ದುಪಡಿಸುವಅಧಿಕಾರವನ್ನುಹೊಂದಿರುತ್ತದೆ.
37. ಯಶಸ್ವಿ ಟೆಂಡರ್‌ದಾರರುಆಹಾರ ಸಾಮಗ್ರಿಗಳನ್ನು ಸಾಲದರೂಪದಲ್ಲಿ ಸರಬರಾಜು ಮಾಡಬೇಕಾಗಿದ್ದು, ಟೆಂಡರ್ ಅಂಗೀಕರಿಸಿದ 10 ದಿವಸದೊಳಗಾಗಿ ರೂ. 100/- ರಛಾಪಾಕಾಗದದಲ್ಲಿಕರಾರನ್ನು ನಿರ್ವಹಿಸಬೇಕು. ಸರಬರಾಜು ಬಾಬ್ತು ಬಿಲ್ಲು ಪಾವತಿಪ್ರತಿ ತಿಂಗಳಿಗೊಮ್ಮೆ ಮಾಡಲಾಗುವುದು. ಆಡಳಿತಾತ್ಮಕ ಕಾರಣಗಳಿಂದ ತಡವಾದಲ್ಲಿಯಾವುದೇರೀತಿಯದಂಡ / ಬಡ್ಡಿ ನೀಡಲಾಗುವುದಿಲ್ಲ. ಅನುದಾನದ ಲಭ್ಯತೆ ಮೇಲೆ ಬಿಲ್ಲುಗಳ ಹಣ ಸಂದಾಯ ಮಾಡಲಾಗುವುದು. ಯಶಸ್ವಿ ಬಿಡ್ಡುದಾರರುಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದಎಲ್ಲಾ ಷರತ್ತುಗಳಿಗೆ ಬದ್ಧವಿರುವುದಾಗಿಒಪ್ಪಿಕರಾರನ್ನು ನಿರ್ವಹಿಸಬೇಕಾಗಿದೆ. ಷರತ್ತುಗಳ ಉಲ್ಲಂಘನೆಯಾದಲ್ಲಿ ಸಂಸ್ಥೆಯನ್ನುಕಪ್ಪು ಪಟ್ಟಿಯಲ್ಲಿ ಸೇರಿಸಿ ಭದ್ರತಾಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
38. ಈ ಟೆಂಡರ್ ಪ್ರಕ್ರಿಯೆಯಲ್ಲಿ ಸಮಸ್ಯೆಗಳು ಉದ್ಭವವಾದಲ್ಲಿಟೆಂಡರ್‌ಕರೆಯುವ ಪ್ರಾಧಿಕಾರದತೀರ್ಮಾನವೇಅಂತಿಮವಾಗಿರುತ್ತದೆ.
39. ಪ್ರತಿ ತಿಂಗಳು ನಿರ್ದೇಶಕರು, ಪಿಲಿಕುಳ ಜೈವಿಕಉದ್ಯಾನವನಈವರ ಬೇಡಿಕೆಯನುಸಾರವಾಗಿ ನಿಗದಿಪಡಿಸಿದ ಅವಧಿಯೊಳಗೆ ಉತ್ತಮಗುಣಮಟ್ಟದಆಹಾರ ಸಾಮಗ್ರಿಗಳನ್ನುಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದಜೈವಿಕಉದ್ಯಾನವನದಗೋದಾಮಿಗೆ ಸಾಗಿಸಿ, ಸಾಮಗ್ರಿಗಳನ್ನು ತೋರಿಸಿ ತೂಕ ಮಾಡಿ ನೀಡತಕ್ಕದ್ದು. ಇದಕ್ಕೆ ಪ್ರತ್ಯೇಕ ಸಾಗಾಣಿಕೆ ವೆಚ್ಚ ನೀಡಲಾಗುವುದಿಲ್ಲ.
40. ಟೆಂಡರ್ ನಿಬಂಧನೆಗಳಿಗನುಸಾರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಒಳಗೊಂಡ "ದಾಖಲಾತಿ ಲಕೋಟೆ"(ತಾಂತ್ರಿಕ ಬಿಡ್)ಯಲ್ಲಿ ಇಟ್ಟಿರಬೇಕು.

- ಇ.ಎಂ.ಡಿರೂ. **2,49,000/-** ನ್ನುಡಿ.ಡಿ./ಬ್ಯಾಂಕರ್ಸ್‌ಚೆಕ್ ಮುಖಾಂತರ ಕಾರ್ಯನಿರ್ವಾಹಕ ನಿರ್ದೇಶಕರು, ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮಈವರಿಗೆ ಪಾವತಿಯಾಗುವಂತೆ ನೀಡುವುದು.
- ಟೆಂಡರ್‌ದಾರರು ಹಿಂದಿನ ಐದು ವರ್ಷಗಳಲ್ಲಿ ಕನಿಷ್ಟ ಎರಡು ವರ್ಷದಲ್ಲಿ ರೂ. 2.00 ಕೋಟಿ ಹಣಕಾಸಿನ ವ್ಯವಹಾರ ನಡೆಸಿರುವ ಬಗ್ಗೆ (ಲೆಕ್ಕಪರಿಶೋಧಕರಿಂದ) ಪಡೆದ ವಾರ್ಷಿಕ ವಹಿವಾಟುತಖ್ತೆ ( Annual turnover statement)ಯದೃಢಿಕೃತ ಪ್ರತಿ ಲಗತ್ತಿಸಬೇಕು.ಇದರಲ್ಲಿಕಳೆದ 5 ವರ್ಷಗಳಲ್ಲಿ ಕನಿಷ್ಟ 1 ವರ್ಷದಲ್ಲಿವಾರ್ಷಿಕರೂ.80.00 ಲಕ್ಷಕ್ಕೆಕಡಿಮೆಇಲ್ಲದಂತೆ ಜೈವಿಕ ಉದ್ಯಾನವನ/ ಅಗ್ರ ಶ್ರೇಣಿಯ ಮೃಗಾಲಯಕ್ಕೆ ಆಹಾರ ಸರಬರಾಜು ಮಾಡಿರುವ ಬಗ್ಗೆ ಸಂಬಂಧಪಟ್ಟ ಸಂಸ್ಥೆಯಿಂದ ದೃಢ ಪತ್ರವನ್ನು ಪಡೆದು ಲಗುತ್ತಿಸಬೇಕು.
- FSSAIಸರ್ಟಿಫಿಕೆಟ್‌ದೃಢಿಕೃತ ಪ್ರತಿ ಲಗತ್ತಿಸಬೇಕು.
- GST ರಿಜಿಸ್ಟ್ರೇಶನ್ (ನಂಬ್ರ)ಪ್ರತಿ ಲಗತ್ತಿಸುವುದು.
- ಪ್ಯಾನ್‌ಕಾರ್ಡ್‌ನಒಂದುಜೆರಾಕ್ಸ್‌ದೃಢೀಕೃತ ಪ್ರತಿ ಲಗತ್ತಿಸುವುದು.
- ಹಿಂದಿನ ಎರಡು ವರ್ಷಗಳ ವರಮಾನತೆರಿಗೆ ಪಾವತಿ ಪತ್ರದ ರಿಟರ್ನ್ಸ್ ಪ್ರತಿ ಸಲ್ಲಿಸಬೇಕು. **(2015-16 ಮತ್ತು 2016-17)**

- ಟೆಂಡರ್‌ದಾರರುಕನಿಷ್ಟಎರಡು ಬಾರಿಜೈವಿಕಉದ್ಯಾನವನಅಥವ ಅಗ್ರ ಶ್ರೇಣಿಯ ಮೃಗಾಲಯಕ್ಕೆ ಆಹಾರ ಸರಬರಾಜು ಮಾಡಿರಬೇಕು.
- ಟೆಂಡರ್‌ದಾರರು ತಾವು ಮತ್ತು ತಮ್ಮ ಸಂಸ್ಥೆ ಯಾವುದೇ ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಲ್ಲದಿರುವ ಬಗ್ಗೆ ಮತ್ತು ಯಾವುದೇ ಕ್ರಿಮಿನಲ್ ಕೇಸ್‌ಗಳಲ್ಲಿ ಭಾಗಿಯಾಗಿರುವುದಿಲ್ಲವೆಂಬ ಬಗ್ಗೆ ಸ್ವಯಂ ಘೋಷಣೆ ಪತ್ರದ ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು.
- ಟೆಂಡರ್‌ದಾರರ ಹೆಸರು, ಪೂರ್ಣ ವಿಳಾಸ, ವಯಸ್ಸು ಮತ್ತುದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.

41. ತಾಂತ್ರಿಕ ಟೆಂಡರ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳು ತಪ್ಪಾಗಿದ್ದಲ್ಲಿ ಆರ್ಥಿಕ ಬಿಡ್ ಕವರನ್ನು ತೆರೆಯಲಾಗುವುದಿಲ್ಲ.

42. ಆಹಾರ ಸಾಮಾಗ್ರಿಖರೀದಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷದವರೆಗೆಅಥವಾ ಮುಂದಿನ ಆದೇಶದವರೆಗೆಚಾಲ್ತಿಯಲ್ಲಿರುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ

ಮೂಡುಶೆಡ್ಡೆ, ಮಂಗಳೂರು

# ಡಾ. ಶಿವರಾಮಕಾರಂತ ಪಿಲಿಕುಳ ನಿಸರ್ಗಧಾಮ

## DR. SHIVARAMA KARANTHA PILIKULA NISARGA DHAMA

ವಿಜ್ಞಾನಕೇಂದ್ರ, ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824 – 2263565 ಫ್ಯಾಕ್ಸ್ : 2263562

Science Centre, Moodushedde Post, Mangalore – 575 028 Ph : 0824 – 2263565 Fax : 2263562

**Website:**www.pilikula.com **Email:**pilikula96@gmail.com


**ಸಂಖ್ಯೆ:ಪಿನಿಧಾ/ವಿವ:189/ಪಿಬಿಪಿ/2017–18** **ದಿನಾಂಕ:26/07/2018**

**ಅರ್ಜಿನಮೂನೆ–1 (ತಾಂತ್ರಿಕ ಬಿಡ್) (DOCUMENT BID)**

| ಕ್ರ. ಸಂ | ಸಲ್ಲಿಸಬೇಕಾದ ದಾಖಲಾತಿಗಳ ವಿವರ | ಸಲ್ಲಿಸಿದ ದಾಖಲಾತಿಗಳು |
|---|---|---|
| 1 | ಟೆಂಡರ್‌ದಾರರ ಹೆಸರು ಮತ್ತು ಪೂರ್ಣ ವಿಳಾಸ<br>ದೂರವಾಣಿ ಸಂಖ್ಯೆ<br>ಮೊಬೈಲ್ ಸಂಖ್ಯೆ | |
| 2 | ಸಲ್ಲಿಸಲಾದಇ.ಎಂ.ಡಿ. ವಿವರ | |
| 3 | ಟೆಂಡರ್‌ದಾರರು ಹಿಂದಿನ ಐದು ವರ್ಷಗಳಲ್ಲಿ ಕನಿಷ್ಟ ಎರಡು ವರ್ಷದಲ್ಲಿ ರೂ. 2.00 ಕೋಟಿ ಹಣಕಾಸಿನ ವ್ಯವಹಾರ ನಡೆಸಿರುವ ಬಗ್ಗೆ (ಲೆಕ್ಕಪರಿಶೋಧಕರಿಂದ) ಪಡೆದ ವಾರ್ಷಿಕ ವಹಿವಾಟುತಖ್ತೆ (Annual turnover statement)ಯ ದೃಢಿಕೃತ ಪ್ರತಿ ಲಗತ್ತಿಸಬೇಕು. ಇದರಲ್ಲಿ ಕಳೆದ 5 ವರ್ಷಗಳಲ್ಲಿ ಕನಿಷ್ಟ 1 ವರ್ಷದಲ್ಲಿ ವಾರ್ಷಿಕರೂ.80.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಜೈವಿಕ ಉದ್ಯಾನವನ/ ಅಗ್ರ ಶ್ರೇಣಿಯ ಮ್ರುಗಾಲಯಕ್ಕೆ ಆಹಾರ ಸರಬರಾಜು ಮಾಡಿರುವ ಬಗ್ಗೆ ಸಂಬಂಧಪಟ್ಟ ಸಂಸ್ಥೆಯಿಂದ ದ್ರಢ ಪತ್ರವನ್ನು ಪಡೆದು ಲಗುತ್ತಿಸಬೇಕು. | |

| | | |
|---|---|---|
| 4 | FSSAIಸರ್ಟಿಫಿಕೆಟ್‌ದೃಢಿಕೃತ ಪ್ರತಿ ಲಗತ್ತಿಸಬೇಕು | |
| 5 | ಪಾನ್‌ಕಾರ್ಡ್‌ದೃಢೀಕೃತ ಪ್ರತಿ ಲಗತ್ತಿಸಬೇಕು | |
| 6 | GST ರಿಜಿಸ್ಟ್ರೇಶನ್ (ನಂಬ್ರ) ಪ್ರತಿ ಲಗತ್ತಿಸುವುದು. | |
| 7 | ಹಿಂದಿನ ಸಾಲುಗಳು (2015–16& 2016–17)ವರಮಾನತೆರಿಗೆ ಮಾಹಿತಿ ಪತ್ರಗಳ ದೃಢೀಕೃತ ಪ್ರತಿ ಲಗತ್ತಿಸಬೇಕು. | |
| 8 | ಟೆಂಡರ್‌ದಾರರು ಕನಿಷ್ಟ ಎರಡು ಬಾರಿ ಜೈವಿಕ ಉದ್ಯಾನವನ ಅಥವ ಅಗ್ರ ಶ್ರೇಣಿಯ ಮೃಗಾಲಯಕ್ಕೆ ಆಹಾರ ಸರಬರಾಜು ಮಾಡಿರಬೇಕು. | |
| 9 | ಟೆಂಡರ್‌ದಾರರುತಾವು ಮತ್ತುತಮ್ಮ ಸಂಸ್ಥೆ ಯಾವುದೇ ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಲ್ಲದಿರುವ ಬಗ್ಗೆ ಮತ್ತುಯಾವುದೇಕ್ರಿಮಿನಲ್ ಕೇಸ್‌ಗಳಲ್ಲಿ ಭಾಗಿಯಾಗಿರುವುದಿಲ್ಲವೆಂಬ ಬಗ್ಗೆ ಸ್ವಯಂಘೋಷಣೆ ಪತ್ರದದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು. | |
| 10 | ಆಹಾರ ಸರಬರಾಜಿನ ವ್ಯವಹಾರ ನಡೆಸಿರುವ ಬಗ್ಗೆ 5–10 ವರ್ಷದಅನುಭವದೃಢಪತ್ರದ ಪ್ರತಿ ಲಗತ್ತಿಸಬೇಕು. | |

ಮೇಲ್ಕಂಡ ನಮೂನೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲಾತಿಗಳು ಮತ್ತು ಮಾಹಿತಿಗಳು ಸತ್ಯವಾಗಿರುತ್ತವೆ. ಇದಕ್ಕೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಟೆಂಡರ್ ಪ್ರಾಧಿಕಾರಕ್ಕೆತಾಂತ್ರಿಕ ಬಿಡ್‌ತೆರೆಯುವ ದಿನ ಸ್ಥಳದಲ್ಲಿ ಹಾಜರುಪಡಿಸಲು ಸಿದ್ದರಿರುತ್ತೇವೆ. ಸಲ್ಲಿಸಿರುವ ಮಾಹಿತಿಗಳು ಮತ್ತು ದಾಖಲಾತಿಗಳು ತಪ್ಪೆಂದುಟೆಂಡರ್ ಪ್ರಾಧಿಕಾರಕ್ಕೆಕಂಡುಬಂದಲ್ಲಿ ನಿಯಮಾನುಸಾರ ಶಿಸ್ತು ಕ್ರಮಜರುಗಿಸಬಹುದೆಂದು ಪ್ರಾಮಾಣಿಕರಿಸುತ್ತೇನೆ.

(ಟೆಂಡರ್‌ದಾರರ ಸಹಿ ಮತ್ತು ಮೊಹರು)

# ಡಾ. ಶಿವರಾಮಕಾರಂತ ಪಿಲಿಕುಳ ನಿಸರ್ಗಧಾಮ

## DR. SHIVARAMA KARANTHA PILIKULA NISARGA DHAMA

ವಿಜ್ಞಾನಕೇಂದ್ರ, ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824 – 2263565 ಫ್ಯಾಕ್ಸ್ : 2263562

Science Centre, Moodushedde Post, Mangalore – 575 028 Ph : 0824 – 2263565 Fax : 2263562

**Website:**www.pilikula.com **Email:**pilikula96@gmail.com


**ಸಂಖ್ಯೆ:ಪಿನಿಧಾ/ವಿವ:189/ಪಿಬಿಪಿ/2017–18** **ದಿನಾಂಕ:26/07/2018**

## ಅರ್ಜಿನಮೂನೆ–2(ಆರ್ಥಿಕ ಬಿಡ್) (FINANCIAL BID)

| ಕ್ರ.ಸಂ | ಆಹಾರ ಪದಾರ್ಥದ ಹೆಸರು | ಪ್ರಮಾಣ | ಪ್ರತಿ ತಿಂಗಳ ಅಂದಾಜು ಬೇಡಿಕೆ | ಪ್ರತಿಕೆ.ಜಿ./ ಸಂಖ್ಯೆಗೆದರ(ಅಂಕೆಗಳಲ್ಲಿ) | ಟೆಂಡರ್‌ದಾರರು ನಮೂದಿಸಲಿರುವ ದರಗಳು /ಅಕ್ಷರಗಳಲ್ಲಿ | ಮೊತ್ತ (ರೂ.) |
|---|---|---|---|---|---|---|
| | **ಐಟಂ ನಂ. I** | | | | | |
| 1 | ಮಾಂಸ (ಶೇ.30 ರಷ್ಟು ಮೂಳೆ) Meat ( with30% bone) | ಕೆ.ಜಿ | 3300 | | | |
| 2 | ಕೋಳಿ (ಜೀವಂತ) (Chicken (Live)) | ಕೆ.ಜಿ. | 600 | | | |
| 3 | ( Snake Feed) | ಸಂಖ್ಯೆ | 21 | | | |
| 4 | ಮೀನು (Fish) | ಕೆ.ಜಿ | 120 | | | |
| 5 | ಮೊಟ್ಟೆ (Eggs) | ಸಂಖ್ಯೆ | 190 | | | |
| | **ಐಟಂ ನಂ. II** | | | | | |
| 1 | ಹುರುಳಿ (Horse Gram) | ಕೆ.ಜಿ | 800 | | | |
| 2 | ಗೋಧಿ ಹೊಟ್ಟು (Wheat Bran) | ಕೆ.ಜಿ | 1000 | | | |

| | | | | | | |
|---|---|---|---|---|---|---|
| 3 | ಅಕ್ಕಿ (Rice) | ಕೆ.ಜಿ | 50 | | | |
| 4 | ಉಪ್ಪು(Common Salt) | ಕೆ.ಜಿ | 30 | | | |
| 5 | ನೆಲಗಡಲೆ (Ground Nut) | ಕೆ.ಜಿ | 30 | | | |
| 6 | ಗೋದಿ (Wheat) | ಕೆ.ಜಿ | 100 | | | |
| 7 | ರಾಗಿ(Ragi) | ಕೆ.ಜಿ | 15 | | | |
| 8 | ಕಬ್ಬು (Sugar Cane) | ಕೆ.ಜಿ | 16 | | | |
| 9 | ಸಿಹಿಗೆಣಸು (Sweat Potato) | ಕೆ.ಜಿ | 300 | | | |
| 10 | ಕ್ಯಾರೆಟ್ (Carrot) | ಕೆ.ಜಿ | 45 | | | |
| 11 | ಹಸಿರು ತರಕಾರಿ( Vegetables) | ಕೆ.ಜಿ | 660 | | | |
| 12 | ಹಾಲು (Milk) | ಲೀ. | 50 | | | |
| 13 | ಹಣ್ಣುಗಳು (Fruits) | ಕೆ.ಜಿ | 660 | | | |
| 14 | ಬೆಲ್ಲ, (Jaggary) | ಕೆ.ಜಿ | 35 | | | |
| 15 | ತೆಂಗಿನಕಾಯಿ (Coconut) | ಸಂಖ್ಯೆ | 65 | | | |
| 16 | ಬ್ರೇಡ್ (Bread - Fresh) | ಕೆ.ಜಿ | 40 | | | |
| 17 | ಇಲಿ ಆಹಾರ (Rat Feed (Pallets) | ಕೆ.ಜಿ | 30 | | | |
| 18 | ಪಶು ಆಹಾರ (Cattle Feed) | ಕೆ.ಜಿ | 60 | | | |
| 19 | ಕೋಳಿ ಆಹಾರ (Poultry Feed) | ಕೆ.ಜಿ | 180 | | | |
| 20 | ಹೆಸರು ಕಾಳು (Green Gram) | ಕೆ.ಜಿ | 80 | | | |

| | | | | | | |
|---|---|---|---|---|---|---|
| 21 | ಕಡ್ಲೆಬೇಳೆ (Bengal Gram) | ಕೆ.ಜಿ | 80 | | | |
| 22 | ಜೋಳ (Sweet Corn) | ಕೆ.ಜಿ | 30 | | | |
| 23 | ಭತ್ತ(Paddy) | ಕೆ.ಜಿ | 30 | | | |
| 24 | ಬಟಾಣಿ( Green Peas) | ಕೆ.ಜಿ | 80 | | | |
| 25 | ಸೂರ್ಯಕಾಂತಿ ಬೀಜ( Sun flower Seeds) | ಕೆ.ಜಿ | 30 | | | |
| 26 | ಕಿರು ಧಾನ್ಯಗಳು (Millates) | ಕೆ.ಜಿ | 30 | | | |
| | | | | | | |
| | **ಐಟಂ ನಂ. III** | | | | | |
| 1 | ಹಸಿರು ಸೊಪ್ಪು (Green Leaves of Halasu/Banyan Trees) | ಕೆ.ಜಿ | 15000 | | | |
| | | | | | | |

ಒಟ್ಟುರೂ.:

ಒಟ್ಟುರೂ.:(ಅಕ್ಷರಗಳಲ್ಲಿ):

ನಮೂದಿಸಿರುವ ದರಗಳು ಎಲ್ಲಾ ತೆರಿಗೆಗಳು/ಸಾಗಾಣಿಕೆ ವೆಚ್ಚ/ಇತರೆ ಶುಲ್ಕಗಳನ್ನು ಒಳಗೊಂಡಿರುತ್ತದೆ.

(ಟೆಂಡರ್‌ದಾರರ ಸಹಿ ಮತ್ತು ಮೊಹರು)